[ **Govt. of Karnataka** **C.R.P. 67]**

| |
|---|
| **Deposition Sheets (RP.No.57) Form No.4 (Civil)** |

**IN THE COURT OF CIVIL JUDGE & J.M.F.C., KARKALA.**

**Criminal Case No. 397/2017**

**ಪಿ.ಡಬ್ಲ್ಯು ಃ 14 ಸಿ.ಡಬ್ಲ್ಯು ಃ 18**

ಸಾಕ್ಷಿದಾರನ ಹೆಸರು ಃ ಎ ಸಿ ಗೌರೀಶ್

ತಂದೆಯ ಹೆಸರು ಃ ಎ ಎಲ್ ಚಿನ್ನಸ್ವಾಮಿ

ಪ್ರಾಯ ಃ **47** ವರ್ಷ

ಉದ್ಯೋಗ ಃ ಡಿವೈಎಸ್ ಪಿ, ಬೆರಳುಮುದ್ರೆ ತಜ್ಞರು

ವಾಸ ಃ ಮಂಗಳೂರು

ದಿನಾಂಕ **23.08.2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ನಾನು 2015 ರಿಂದ ಐಜಿಪಿ ಕಚೇರಿ, ಮಂಗಳೂರು ಇಲ್ಲಿ ಪೋಲಿಸ್ ಉಪಾಧೀಕ್ಷಕರಾಗಿ ಮತ್ತು ಬೆರಳು ಮುದ್ರೆ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2.ದಿಃ 05-12-2016 ರಂದು ಉಡುಪಿ ಜಿಲ್ಲಾ ನಿಸ್ಸಂತು ಘಟಕದಿಂದ ಉಡುಪಿ ಜಿಲ್ಲಾ ಬೆರಳುಮುದ್ರಾ ಘಟಕದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಚ್ಯುತ್ ಎ ಎಸ್ ಐ ರವರಿಗೆ ಕರೆ ಮಾಡಿ ಕಾರ್ಕಳ ಗ್ರಾಮಾಂತರ ಪೋಲಿಸ್ ಠಾಣೆಯ ಮೊಕದ್ದಮೆ ಸಂಃ 219/16 ಕಲಂ 454, 457, 511 ಐಪಿಸಿ ಪ್ರಕರಣದಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಅಚ್ಯುತ್, ವಿಜಯಕುಮಾರ್ ಮತ್ತು ರಮೇಶ್ ನಾಯಕ್ ರವರು ಭೇಟಿ ನೀಡಿದ್ದು, ಸದರಿ ಸ್ಥಳದಲ್ಲಿ ಆರೋಪಿತರ ಸಂಪರ್ಕಕ್ಕೆ ಬಂದಿರುಬಹುದಾದ ಎರಡು ಮರದ ಬಾಗಿಲು, ಡ್ರಾವರ್ ಒಂದು, ಪ್ಲ್ಯಾಸ್ಟಿಕ್ ಬಾಕ್ಸ್-1, ಅಲ್ಮೇರಾ-1 ಇವುಗಳನ್ನು ಪರಿಶೀಲಿಸಿ ನೋಡಿದಾಗ ಪ್ಲ್ಯಾಸ್ಟಿಕ್ ಬಾಕ್ಸ್-1 ಮೇಲೆ ಒಂದು ಆಕಸ್ಮಿಕ ಬೆರಳು ಮುದ್ರೆ ಇದ್ದು, ಅದನ್ನು ಗುರುತಿಸಿ ಅಂಟು ಟೇಪಿನಿಂದ ಸ್ಥಳಾಂತರಿಸಿಕೊಂಡು ಎ ಎಂದು ಗುರುತಿಸಿಕೊಂಡಿರುತ್ತಾರೆ. ಸದರಿ ಆಕಸ್ಮಿಕ ಬೆರಳು ಮುದ್ರೆಯನ್ನು ಅವರು ನನಗೆ ತಲುಪಿಸಿದ್ದು, ಅದನ್ನು ನಾನು ಮನೆಯ ವಾಸಿ ರತಿ ಶೆಟ್ಟಿರವರ ಬೆರಳು ಮುದ್ರೆಯೊಂದಿಗೆ ಪರಿಶೀಲಿಸಿ

ನೋಡಲಾಗಿ ಹೊಂದಾಣಿಕೆ ಆಗಿರುವುದಿಲ್ಲ. ನಂತರ ಆಕಸ್ಮಿಕ ಬೆರಳು ಮುದ್ರೆಯನ್ನು ಎ ಎಫ್ ಐ ಎಸ್ ದತ್ತಾಂಶದಲ್ಲಿ ಪರಿಶೀಲಿಸಿ ನೋಡಲಾಗಿ ಅದು ಈ ಹಿಂದೆ ಉಡುಪಿ ನಗರ ಪೋಲಿಸ್ ಠಾಣಾ ಮೊಕದ್ದಮೆ ಸಂಃ 185/98 ಕಲಂ 447, 380 ಐ ಪಿ ಸಿ ಪ್ರಕರಣದಲ್ಲಿ ದಸ್ತಗಿರಿಯಾದ ಆರೋಪಿ ಉಮಾನಾಥ ಪ್ರಭು ಅಲಿಯಾಸ್ ರಾಜೇಶ್, ತಂದೆಃ ವಾಸುದೇವ ಪ್ರಭು ಇವರ ಎಡಗೈ ಉಂಗುರ ಬೆರಳು ಮುದ್ರೆಗೆ ಹೊಂದಾಣಿಕೆಯಾಗಿರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಆಕಸ್ಮಿಕ ಬೆರಳು ಮುದ್ರೆ ಪ್ರಮಾಣ ಪತ್ರ , ಚಾರ್ಟಿಂಗ್ ಪ್ರತಿ, ಅಭಿಪ್ರಾಯಕ್ಕೆ ಆಧಾರಗಳು ಮತ್ತು ಪತ್ತೆ ವರದಿಯನ್ನು ನೀಡಿರುತ್ತೇನೆ.

3. ಸಾಕ್ಷಿಯು ನೀಡಿದ ವರದಿಯನ್ನು ಈಗಾಗಲೇ ಮೂಲ ಪ್ರಕರಣ ಸಂಖ್ಯೆ ಸಿಸಿ ನಂಃ 223/17 ರಲ್ಲಿ ನಿಪಿ-8 ಎಂದು ಗುರುತಿಸಲಾಗಿದ್ದು, ಸದರಿ ವರದಿಯ ಜೆರಾಕ್ಸ್ ಪ್ರತಿಯನ್ನು ಈ ಪ್ರಕರಣದಲ್ಲಿ ನೋಡಿ ಗುರುತಿಸುತ್ತೇನೆ. ಆಕಸ್ಮಿಕ ಬೆರಳುಮುದ್ರೆ ಪರೀಕ್ಷೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಆಕಸ್ಮಿಕ ಮತ್ತು ಒಪ್ಪಿತ ಬೆರಳುಮುದ್ರೆಯ ಚಾರ್ಟಿಂಗ್ ಮೂಲ ಪ್ರತಿ ಹಾಜರುಪಡಿಸುತ್ತಿದ್ದು, ಅದನ್ನು ನಿಪಿ-12 ಎಂದು, ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

4. ಆಕಸ್ಮಿಕ ಬೆರಳುಮುದ್ರೆ ಮತ್ತು ಅಂಗೀಕೃತ ಬೆರಳುಮುದ್ರೆ ಇವುಗಳಲ್ಲಿರುವ ರೇಖಾ ಲಕ್ಷಣಗಳ ಸ್ವರೂಪ, ಸ್ಥಾನ ಮತ್ತು ಅಂತರ ಎರಡೂ ಮುದ್ರೆಗಳಲ್ಲಿ ಅನುಕ್ರಮತೆ ಇರುವುದರಿಂದ ಎರಡೂ ಮುದ್ರೆಗಳು ಹೊಂದಾಣಿಕೆಯಾಗಿರುತ್ತವೆ ಎಂದು ಅಭಿಪ್ರಾಯಕ್ಕೆ ಬಂದಿರುತ್ತೇವೆ.

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಕೆ ಬಿ ಎಸ್ ವಕೀಲರಿಂದಃ**

5. ನಿಪಿ-11 ವರದಿ ನೀಡುವಂತೆ ಅಚ್ಯುತ್ ಕುಮಾರ್ ಎ ಎಸ್ ಐ ರವರು ಉಡುಪಿ ಜಿಲ್ಲಾ ಬೆರಳು ಮುದ್ರಾ ಘಟಕಕ್ಕೆ ಕೋರಿಕೆ ಪತ್ರ ಸಲ್ಲಿಸಿರುತ್ತಾರೆ. ಸದ್ರಿ ಕೋರಿಕೆಯ ಮೇರೆಗೆ ನಾನು ನಿಪಿ-11 ವರದಿಯನ್ನು ನೀಡಿರುತ್ತೇನೆ. ಸದ್ರಿ ಕೋರಿಕೆ ಪತ್ರದಲ್ಲಿ ಬೆರಳು ಮುದ್ರೆಯು ಉಮನಾಥ ಪ್ರಭುರವರಿಗೆ ಸೇರಿದ್ದು ಎಂದು ತಿಳಿಸಿರುವುದಿಲ್ಲ. ಹಿಂದಿನ ಪ್ರಕರಣಗಳಲ್ಲಿ ಸಂಗ್ರಹಿಸಿದ ಉಮನಾಥ ಪ್ರಭುರವರ ಬೆರಳಚ್ಚು ಮುದ್ರೆಯು ನಮ್ಮ ದತ್ತಾಂಶಗಳಲ್ಲಿ ಇತ್ತು. ಅರೋಪಿಯ ಹಿಂದಿನ ಪ್ರಕರಣದ ಬಗ್ಗೆ ನಿಪಿ-11 ರಲ್ಲಿ ಕಾಣಿಸಿರುವುದಿಲ್ಲ. ಅರೋಪಿಯನ್ನು

ನಾನು ನೋಡಿರುವುದಿಲ್ಲ. ನಾನು ನೀಡಿದ ವರದಿಯಲ್ಲಿ ಆರೋಪಿಯ ಹೆಸರು ಹಾಗೂ ವಾಸ ರಾಮನಗರ, ಪುತ್ತೂರು, ದ.ಕ. ಜಿಲ್ಲೆ ಎಂದು ಕಾಣಿಸಿರುತ್ತೇನೆ. ಸದ್ರಿ ವ್ಯಕ್ತಿಯ ಪ್ರಾಯವನ್ನು ಕಾಣಿಸಿರುವುದಿಲ್ಲ. ಆರೋಪಿಯ ಮೇಲೆ ಒಟ್ಟು 9 ಪ್ರಕರಣಗಳು ದಾಖಲಾದ ವಿಚಾರ ತಿಳಿದಿದೆ. ನಾನು ಸಿಸಿ 293/2017 ರಲ್ಲಿ ವರದಿ ನೀಡಿರುತ್ತೇನೆ. ವ್ಯಕ್ತಿಗಳು ಮಾಡುವ ಕೆಲವು ಕೆಲಸಗಳಿಂದ ಅಂಗೈಯ ರೇಖೆಗಳು ಸವೆಯ ಬಹುದು ಆದರೆ ಬದಲಾಗುವುದಿಲ್ಲ. ರೇಖೆಗಳು ಸವೆದು ಹೋದರೆ ಗುರುತಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಉಡುಪಿ ನಗರ ಠಾಣೆಯ ಅಕ್ರ ನಂ. 185/1998 ರಲ್ಲಿ ಆರೋಪಿಯ ಬೆರಳು ಮುದ್ರೆಯನ್ನು ಸಂಗ್ರಹಿಸಿದ್ದು ಅದು ನಮ್ಮ ಇಲಾಖೆಯ ದತ್ತಾಂಶಗಳಲ್ಲಿ ದಾಖಲಾಗಿರುತ್ತದೆ. ಸದ್ರಿ ಬೆರಳು ಮುದ್ರೆಯನ್ನು ಪ್ರಸ್ತುತ ಪ್ರಕರಣದ ಬೆರಳು ಮುದ್ರೆಗೆ ಹೊಂದಾಣಿಕೆಮಾಡಲಾಗಿದ್ದು ಅದು ಆರೋಪಿಯ ಬೆರಳು ಮುದ್ರೆಗೆ ಹೊಂದಾಣಿಕೆ ಆಗಿರುತ್ತದೆ. ಪುತ್ತೂರು ತಾಲೂಕಿನ ಉಮನಾಥ ಪ್ರಭುವಿಗೂ ಈ ಪ್ರಕರಣದ ಆರೋಪಿಗೂ ಸಂಬಂಧ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಚಾಸಾ- 20 ರವರ ಕೋರಿಕೆಯ ಮೇರೆಗೆ ದಾಖಲೆಗಳಿಗೆ ಅನುಗುಣವಾಗಿ ಸುಳ್ಳು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸೂಕ್ಷವಾಗಿ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓದಿ ಹೇಳಿ ಕೇಳಿ ಸರಿ ಇದೆ.

ಎರಡನೆ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಾರ್ಕಳ